2017 ಕ.ತೀ.ವ. 157

## ಸನ್ಮಾನ್ಯ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೊ ಕಮಲ್ ಮುಖರ್ಜಿ
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳೀಮಠ್

### ಸಿ.ಎಂ. ನಾಗರಾಜ್ –ವಿರುದ್ಧ– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ*

ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮದ 4ನೇ ಪ್ರಕರಣದ ಅಡಿಯಲ್ಲಿನ ರಿಟ್ ಅರ್ಜಿ.

ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ 17ಬಿ ಪ್ರಕರಣ.

ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ, ಶ್ರೀ ಎಲ್. ಶೇಖರ್‌ರವರು, ಸನ್ಮಾನ್ಯ ಏಕಪೀಠ ನ್ಯಾಯಾಧೀಶರು, ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ (ಸಂಕ್ಷಿಪ್ತವಾಗಿ ಸದರಿ ಅಧಿನಿಯಮ) 17ಬಿ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಪರಿಗಣಿಸುವಾಗ, ಅರ್ಜಿಯನ್ನು ದಾಖಲು ಮಾಡಿದ ದಿನಾಂಕದಿಂದ ಸದರಿ ಅಧಿನಯಮದ 17ಬಿ ಪ್ರಕರಣದ ಉಪಬಂಧಗಳ ನಿಬಂಧನೆಗಳಲ್ಲಿರುವ ಮಜೂರಿಗಳ ಸಂದಾಯವನ್ನು ನಿರ್ದೇಶಿಸಿ ಕಾನೂನಿನಲ್ಲಿ ತಪ್ಪು ಮಾಡಲಾಗಿದೆಯೆಂದು ವಾದವನ್ನು ಮಂಡಿಸಿದ್ದಾರೆ. ಅಪೀಲುದಾರನು, ಐತೀರ್ಪಿನ ದಿನಾಂಕದಿಂದ, 17ಬಿ ಪ್ರಕರಣದ ನಿಬಂಧನೆಗಳಲ್ಲಿರುವ ಸಂದಾಯಕ್ಕೆ ಹಕ್ಕುಳ್ಳವನಾಗಿರುತ್ತಾನೆಂದು ವಾದವನ್ನು ಮಂಡಿಸಿದ್ದಾರೆ.

ಉದ್ಯೋಗದಾತನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀಮತಿ ಹೆಚ್.ಆರ್.ರೇಣುಕಾರವರು ತದ್ವಿರದ್ಧವಾಗಿ, ಕೆಲಸಗಾರನು, ಅಂಥ ಸಂದಾಯ ಕೋರಿ

* ರಿಟ್ ಅಪೀಲು ಸಂಖ್ಯೆ.: 3485/2015, ದಿನಾಂಕ: 18ನೇ ಫೆಬ್ರವರಿ, 2016.

**ಶಪಥ ಪತ್ರವನ್ನು ಅವನು ದಾಖಲು ಮಾಡಿದ ದಿನಾಂಕದಿಂದ ಪರಿಹಾರಕ್ಕೆ ಹಕ್ಕುಳ್ಳವನಾಗಿರುತ್ತಾನೆಂದು ವಾದವನ್ನು ಮಂಡಿಸಿದ್ದಾರೆ.**

**ಸದರಿ ಅಧಿನಿಯಮದ 17ಬಿ ಪ್ರಕರಣವನ್ನು ನಾವು ಓದಿಕೊಂಡಿದ್ದು, ಅಂತಿಮವಾಗಿ ಪಡೆದುಕೊಳ್ಳಲಾದ ಪೂರ್ಣ ಮಜೂರಿಗಳು'' ಮತ್ತು ಅಂಥ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯ ಸಮಯದಲ್ಲಿ, ಅಭಿವ್ಯಕ್ತಿಯನ್ನು ವಿಧಾನ ಮಂಡಲವು ಪ್ರಜ್ಞಾಪೂರ್ವಕವಾಗಿ ಉಪಯೋಗಿಸಿದೆ ಯಾವುದೇ ನಿಯಮದ ಅಡಿಯಲ್ಲಿ ಅವನಿಗೆ ಅಂಗೀಕಾರಾರ್ಹವಾದ ಇತರೆ ಯಾವುದೇ ಭತ್ಯೆಗಳು ಸೇರಿದಂತೆ, ಅವನಿಂದ ಅಂತಿಮವಾಗಿ ಡ್ರಾ ಮಾಡಿಕೊಂಡ ಪೂರ್ಣ ಮಜೂರಿಗಳನ್ನು ಕೆಲಸಗಾರನು ಡ್ರಾ ಮಾಡಿಕೊಳ್ಳತಕ್ಕದ್ದು ಎಂಬುದನ್ನು ಅರ್ಥೈಸುತ್ತದೆ, ಅಂಥ ಅವಧಿ ಸಮಯದಲ್ಲಿ ಯಾವುದೇ ಸಂಸ್ಥೆಯಲ್ಲಿ ಕೆಲಸಗಾರನನ್ನು ನಿಯೋಜಿಸಿಲ್ಲದಿದ್ದಲ್ಲಿ ಮತ್ತು ಅಂಥ ಕೆಲಸಗಾರನಿಂದ ಶಪಥ ಪತ್ರವನ್ನು, ಅಂಥ ನ್ಯಾಯಾಲಯದಲ್ಲಿ ಅದಕ್ಕಾಗಿ ದಾಖಲಿಸಿದಲ್ಲಿ ಅಂಥ ವ್ಯವಹರಣೆಗಳನ್ನು ಪ್ರಾರಂಭಿಸಿದ ದಿನಾಂಕದಿಂದ ನಿರ್ಣಯವಾಗುವವರೆಗೆ ಪರಿಣಾಮಕಾರಿಯಾಗಿರತಕ್ಕದ್ದು ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ರಿಟ್ ಅಪೀಲನ್ನು ಅಂಗೀಕರಿಸಿ ವಿಲೆ ಮಾಡಿದೆ.**

ಅಪೀಲುದಾರರ ಪರ : ಶ್ರೀ ಎಲ್. ಶೇಖರ್, ವಕೀಲರು ;
ಪ್ರತ್ಯಪೀಲುದಾರರ ಪರ : ಶ್ರೀಮತಿ ಎಚ್.ಆರ್. ರೇಣುಕಾ, ವಕೀಲರು.

## ತೀರ್ಪು

**ಹಂಗಾಮಿ ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೊ ಕಮಲ್ ಮುಖರ್ಜಿ :**

ಸಂಕ್ಷಿಪ್ತ ಅಂಶವನ್ನು ಎತ್ತಲಾಗಿದೆ. ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ, ಶ್ರೀ ಎಲ್. ಶೇಖರ್‌ರವರು, ಸನ್ಮಾನ್ಯ ಏಕಪೀಠ ನ್ಯಾಯಾಧೀಶರು, ಕೈಗಾರಿಕಾ ವಿವಾದಗಳ ಅಧಿನಿಯಮ, 1947 ರ (ಸಂಕ್ಷಿಪ್ತವಾಗಿ ಸದರಿ ಅಧಿನಿಯಮ)

17ಬಿ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಪರಿಗಣಿಸುವಾಗ, ಅರ್ಜಿಯನ್ನು ದಾಖಲು ಮಾಡಿದ ದಿನಾಂಕದಿಂದ ಸದರಿ ಅಧಿನಿಯಮದ 17ಬಿ ಪ್ರಕರಣದ ಉಪಬಂಧಗಳ ನಿಬಂಧನೆಗಳಲ್ಲಿರುವ ಮಜೂರಿಗಳ ಸಂದಾಯವನ್ನು ನಿರ್ದೇಶಿಸಿ ಕಾನೂನಿನಲ್ಲಿ ತಪ್ಪು ಮಾಡಲಾಗಿದೆಯೆಂದು ವಾದವನ್ನು ಮಂಡಿಸಿದ್ದಾರೆ. ಅಪೀಲುದಾರನು, ಐತೀರ್ಪಿನ ದಿನಾಂಕದಿಂದ, 17ಬಿ ಪ್ರಕರಣದ ನಿಬಂಧನೆಗಳಲ್ಲಿರುವ ಸಂದಾಯಕ್ಕೆ ಹಕ್ಕುಳ್ಳವನಾಗಿರುತ್ತಾನೆಯೆಂದು ಅವರು ವಾದವನ್ನು ಮಂಡಿಸಿದ್ದಾರೆ.

2. ಉದ್ಯೋಗದಾತನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀಮತಿ ಹೆಚ್.ಆರ್.ರೇಣುಕಾರವರು ತದ್ವಿರುದ್ಧವಾಗಿ, ಕೆಲಸಗಾರನು, ಅಂಥ ಸಂದಾಯ ಕೋರಿ ಶಪಥ ಪತ್ರವನ್ನು ಅವನು ದಾಖಲು ಮಾಡಿದ ದಿನಾಂಕದಿಂದ ಪರಿಹಾರಕ್ಕೆ ಹಕ್ಕುಳ್ಳವನಾಗಿರುತ್ತಾನೆಯೆಂದು ವಾದವನ್ನೂ ಮಂಡಿಸಿದ್ದಾರೆ.

3. ಸದರಿ ಅಧಿನಿಯಮದ 17ಬಿ ಪ್ರಕರಣವನ್ನು ಕೆಳಗಿನಂತೆ ಓದಿಕೊಳ್ಳುವುದು.

> ***17ಬಿ. ಮೇಲಿನ ನ್ಯಾಯಾಲಯಗಳಲ್ಲಿ ವ್ಯವಹರಣೆಗಳು ಇತ್ಯರ್ಥದಲ್ಲಿರುವಾಗ ಕೆಲಸಗಾರನಿಗೆ ಪೂರ್ಣ ಮಜೂರಿಗಳ ಸಂದಾಯ.–*** *ಯಾವುದೇ ಪ್ರಕರಣದಲ್ಲಿ ಕಾರ್ಮಿಕ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣವು ತನ್ನ ಐತೀರ್ಪಿನ ಮೂಲಕ ಯಾವನೇ ಕೆಲಸಗಾರನನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲು ನಿರ್ದೇಶಿಸಿರುವಲ್ಲಿ ಮತ್ತು ನಿಯೋಜಕನು, ಅಂಥ ಐತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಅಥವಾ ಸರ್ವೋಚ್ಚ ನ್ಯಾಯಾಲಯದಲ್ಲಿ ಯಾವುದೇ ವ್ಯವಹರಣೆಗಳನ್ನು ಸಲ್ಲಿಸಿರುವಲ್ಲಿ, ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯದಲ್ಲಿ ಅಂಥ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಅಂಥ ಕೆಲಸಗಾರನಿಗೆ ನಿಯೋಜಕನು, ಅವನು*

*ಕೊನೆಯಲ್ಲಿ ಪಡೆದ ಪೂರ್ಣ ಮಜೂರಿಗಳನ್ನು, ಅಂಥ ಅವಧಿಯಲ್ಲಿ ಆ ಕೆಲಸಗಾರನು ಯಾವುದೇ ಕಾರ್ಯಸಂಸ್ಥೆಯಲ್ಲಿ ನಿಯೋಜಿತನಾಗಿರದಿದ್ದರೆ ಮತ್ತು ಅಂಥ ನ್ಯಾಯಾಲಯದಲ್ಲಿ ಹಾಗೆಂದು ಅಂಥ ಕೆಲಸಗಾರನು ಶಪಥಪತ್ರವನ್ನು ಸಲ್ಲಿಸಿದ್ದರೆ ಯಾವುದೇ ನಿಯಮದ ಮೇರೆಗೆ ಅವನಿಗೆ ಅನುಮತಿಸಬಹುದಾಗಿದ್ದ ಯಾವುದೇ ಜೀವನಾಂಶ ಭತ್ಯವೂ ಸೇರಿ ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು:*

*ಪರಂತು, ಅಂಥ ಕೆಲಸಗಾರನು, ಅಂಥ ಯಾವುದೇ ಆ ಅವಧಿಯಲ್ಲಿ ಅಥವಾ ಆ ಅವಧಿಯ ಯಾವುದೇ ಭಾಗದಲ್ಲಿ ನಿಯೋಜಿತನಾಗಿದ್ದು, ಸಾಕಷ್ಟು ಪರಿಶ್ರಮ ಧನವನ್ನು ಪಡೆಯುತ್ತಿದ್ದನೆಂದು ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯಕ್ಕೆ ಮನದಟ್ಟಾಗುವಂತೆ ರುಜುವಾತು ಪಡಿಸಿರುವಲ್ಲಿ, ನ್ಯಾಯಾಲಯವು, ಅಂಥ ಅವಧಿಗೆ ಅಥವಾ ಸಂದರ್ಭಾನುಸಾರ, ಅದರ ಭಾಗಕ್ಕೆ ಈ ಪ್ರಕರಣದ ಮೇರೆಗೆ ಯಾವುವೇ ಮಜೂರಿಗಳನ್ನು ಸಂದಾಯ ಮಾಡತಕ್ಕದ್ದಲ್ಲವೆಂದು ಆದೇಶಿಸತಕ್ಕದ್ದು.*

4. ಸದರಿ ಅಧಿನಿಯಮದ 17ಬಿ ಪ್ರಕರಣವನ್ನು ನಾವು ಓದಿಕೊಂಡಿದ್ದು, ಅಂತಿಮವಾಗಿ ಪಡೆದುಕೊಳ್ಳಲಾದ "ಪೂರ್ಣ ಮಜೂರಿ"ಗಳು ಮತ್ತು ಅಂಥ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯ ಸಮಯದಲ್ಲಿ, ಎಂಬ ಅಭಿವ್ಯಕ್ತಿಯನ್ನು ವಿಧಾನ ಮಂಡಲವು ಪ್ರಜ್ಞಾಪೂರ್ವಕವಾಗಿ ಉಪಯೋಗಿಸಿದೆ ಯಾವುದೇ ನಿಯಮದ ಅಡಿಯಲ್ಲಿ ಅವನಿಗೆ ಅಂಗೀಕಾರ್ಹವಾದ ಇತರೆ ಯಾವುದೇ ಭತ್ಯೆಗಳು ಸೇರಿದಂತೆ, ಅವನಿಂದ ಅಂತಿಮವಾಗಿ ಡ್ರಾ ಮಾಡಿಕೊಂಡ ಪೂರ್ಣ ಮಜೂರಿಗಳನ್ನು ಕೆಲಸಗಾರನು ಡ್ರಾ ಮಾಡಿಕೊಳ್ಳತಕ್ಕದ್ದು ಎಂಬುದನ್ನು ಅರ್ಥೈಸುತ್ತದೆ, ಅಂಥ ಅವಧಿ ಸಮಯದಲ್ಲಿ ಯಾವುದೇ ಸಂಸ್ಥೆಯಲ್ಲಿ ಕೆಲಸಗಾರನನ್ನು ನಿಯೋಜಿಸಿಲ್ಲದಿದ್ದಲ್ಲಿ ಮತ್ತು ಅಂಥ

ಕೆಲಸಗಾರನಿಂದ ಶಪಥ ಪತ್ರವನ್ನು, ಅಂಥ ನ್ಯಾಯಾಲಯದಲ್ಲಿ ಅದಕ್ಕಾಗಿ ದಾಖಲಿಸಿದಲ್ಲಿ ಅಂಥ ವ್ಯವಹರಣೆಗಳನ್ನು ಪ್ರಾರಂಭಿಸಿದ ದಿನಾಂಕದಿಂದ ನಿರ್ಣಯವಾಗುವವರೆಗೆ ಪರಿಣಾಮಕಾರಿಯಾಗಿರತಕ್ಕದ್ದು.

5. ನಾವು, ಆದ್ದರಿಂದ, ಪ್ರಶ್ನಿತ ಆದೇಶವನ್ನು ಮಾರ್ಪಡಿಸಿದ್ದೇವೆ ಮತ್ತು ಈ ನ್ಯಾಯಾಲಯದಲ್ಲಿ ಉದ್ಯೋಗದಾತನಿಂದ ರಿಟ್ ಅಪೀಲನ್ನು ದಾಖಲು ಮಾಡಿದ ದಿನಾಂಕದಿಂದ ಸದರಿ ಅಧಿನಿಯಮದ 17ಬಿ ಪ್ರಕರಣದ ಅಡಿಯಲ್ಲಿ ಮಜೂರಿಗಳನ್ನು ಸಂದಾಯ ಮಾಡಲು ನಿರ್ದೇಶಿಸಿದೆ.

6. ಮೇಲೆ ಹೇಳಲಾದ ನಿರ್ದೇಶನದೊಂದಿಗೆ ರಿಟ್ ಅಪೀಲನ್ನು ವಿಲೆ ಮಾಡಲಾಗಿದೆ.

ನಾವು, ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶ ಮಾಡಿರುವುದಿಲ್ಲ.